**ಪ್ರಕಟಣೆ**

ಕರ್ನಾಟಕ ಸರ್ಕಾರ

ಜಿಲ್ಲಾಧಿಕಾರಿಗಳ ಕಾರ್ಯಾಲಯ,
ರಾಯಚೂರು.
ದಿನಾಂಕ : 01-11-2010

## ವಿಷಯ : 14 ವರ್ಷದೊಳಗಿನ ಮಕ್ಕಳನ್ನು ವಿವಿಧ ಸಂಸ್ಥೆ / ಅಂಗಡಿ / ಕ್ಷೇತ್ರಗಳಲ್ಲಿ ಹಾಗೂ ಕಾರ್ಖಾನೆಗಳಲ್ಲಿ ಬಾಲಕಾರ್ಮಿಕರಾಗಿ ಕೆಲಸಕ್ಕೆ ನೇಮಿಸುವುದನ್ನು ನಿಷೇಧಿಸಿರುವ ಬಗ್ಗೆ

ರಾಯಚೂರು ಜಿಲ್ಲೆಗಳಲ್ಲಿರುವ ಹೋಟೆಲ್, ಗ್ಯಾರೇಜ್, ಬಸ್‌ಸ್ಟ್ಯಾಂಡ್, ಮನೆಕೆಲಸ, ಮಂಡಕ್ಕಿ ಭಟ್ಟಿ, ವಿವಿಧ ಅಂಗಡಿಗಳು ಹಾಗೂ ವಾಣಿಜ್ಯ ಸಂಸ್ಥೆಗಳು ಅಂದರೆ ಕಿರಾಣಿ, ಜನರಲ್ ಸ್ಟೋರ್, ರಸಗೊಬ್ಬರ, ಕೀಟನಾಶಕ, ಔಷಧಿ ಅಂಗಡಿ, ಬಟ್ಟೆ ಹೊಲಿಗೆ, ಪಾತ್ರೆ, ಟ್ರೇಡಿಂಗ್ ಮುಂತಾದ ಅಂಗಡಿಗಳು, ರೇಡಿಯೋ ಎಲೆಕ್ಟ್ರಿಕಲ್ ಮೋಟಾರ್ ಗ್ಯಾರೇಜ್, ಮೆಕ್ಯಾನಿಕಲ್, ರಿಪೇರಿ, ಬೆಸುಗೆ ಮುಂತಾದ ಕಟ್ಟಡ ನಿರ್ಮಾಣ, ಗ್ರಾನೈಟ್, ಕೋಳಿ ಸಾಕಾಣಿಕೆ, ಹತ್ತಿಕ್ಷೇತ್ರ, ಹೊಗೆಸೊಪ್ಪು, ಕೃಷಿ ಉದ್ದಿಮೆಗಳು, ಹೋಟೆಲ್, ಖಾನಾವಳಿ, ಚಲನಚಿತ್ರ ಮಂದಿರ, ಬಾರ್ ಮತ್ತು ರೆಸ್ಟೋರೆಂಟ್‌ಗಳು, ವಸತಿ ಗೃಹ, ಕ್ಲಬ್, ಡಿಸೇಲ್ ಮತ್ತು ಪೆಟ್ರೋಲ್ ಪಂಪ್ ಮುಂತಾದ ವಾಣಿಜ್ಯ ಸಂಸ್ಥೆಗಳು, ಟೆಕ್ಸ್‌ಟೈಲ್ಸ್, ಹ್ಯಾಂಡ್‌ಲೂಂ, ರೋಲಿಂಗ್ ಮತ್ತು ರಿ ರೋಲಿಂಗ್, ಕಬ್ಬಿಣ ಕಾರ್ಖಾನೆ, ಅಕ್ಕಿ ಗಿರಣಿ, ಎಣ್ಣೆ ಗಿರಣಿ, ಸ್ಟೋನ್ ಕ್ರಷಿಂಗ್, ಸಾಮಿಲ್, ಸ್ಟೋನ್ ಪಾಲಿಶಿಂಗ್, ಫ್ಲೋರ್ ಮಿಲ್, ಪೇಯಿಂಟಿಂಗ್ ಕಾಂಕ್ರೀಟ್ ಪೈಪ್ ತಯಾರಿಕೆ, ಫರ್ಟಿಲೈಸರ್ಸ್ ಮತ್ತು ಕೆಮಿಕಲ್ಸ್, ಆಟೋಮೊಬೈಲ್, ರಿಪೇರಿ ಶಾಪ್ಸ್, ಪ್ಲಾಸ್ಟಿಕ್ ಉದ್ದಿಮೆಗಳು, ಇಟ್ಟಿಗೆ ಭಟ್ಟಿ, ಹೆಂಚು ಕಾರ್ಖಾನೆ, ಸುಣ್ಣ ಮತ್ತು ಚರ್ಮದ ಉತ್ಪನ್ನಗಳು, ಕಲ್ಲು ಹೊಡೆಯುವುದು ಮತ್ತು ತಯಾರಿಸುವುದು. ತಂಬಾಕಿನಿಂದ ಉತ್ಪಾದಿಸಲಾದ ತಂಬಾಕು ಉತ್ಪನ್ನಗಳು, ಟೈರ್ ರೀ ಟ್ರೇಡಿಂಗ್, ಪಾತ್ರೆಗಳನ್ನು ತಯಾರಿಸುವುದು ಮುಂತಾದ ಕಾರ್ಖಾನೆಗಳ ಉದ್ಯೋಗಿದಾರರ ಹಾಗೂ ಮಾಲೀಕರುಗಳ ಗಮನಕ್ಕೆ ತರಬಯಸುವುದೇನೆಂದರೆ ಬಾಲಕಾರ್ಮಿಕ ಪದ್ಧತಿ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ 1986ರ ಪ್ರಕರಣ 3 ರಂತೆ ಅಪಾಯಕಾರಿ ಉದ್ದಿಮೆಯಲ್ಲಿ 14 ವರ್ಷದೊಳಗಿನ ಬಾಲಕಾರ್ಮಿಕರನ್ನು ಕೆಲಸಕ್ಕೆ ನೇಮಿಸಿಕೊಳ್ಳುವುದು ಅಥವಾ ಕೆಲಸ ನಿರ್ವಹಿಸಲು ಅವಕಾಶ ಮಾಡಿಕೊಡುವುದು ಶಿಕ್ಷಾರ್ಹ ಅಪರಾಧವಾಗುತ್ತದೆ. ಒಟ್ಟು 81 ಕ್ಷೇತ್ರಗಳನ್ನು ಅಪಾಯಕಾರಿ ಎಂದು ಕಾಯ್ದೆಯಡಿಯಲ್ಲಿ ಗುರುತಿಸಿ ಮಕ್ಕಳ ದುಡಿಮೆಯನ್ನು ನಿಷೇಧಿಸಲಾಗಿದೆ. **ಹತ್ತಿ ಬೀಜ ಕ್ರಾಸಿಂಗ್, ಹೊಗೆಸೊಪ್ಪು ಒಣಗಿಸುವುದು, ಮೆಣಸಿನ ಗದ್ದೆ ಹಾಗೂ ಇತರೆ ಕೃಷಿ ಕ್ಷೇತ್ರದಲ್ಲಿ ಅಪಾಯಕಾರಿ ಔಷಧ ಸಿಂಪಡಿಸಿರುವ ಕಾರಣ ಇದು ಮಕ್ಕಳಿಗೆ ಬಹಳ ಅಪಾಯ. ಆದ್ದರಿಂದ ಈ ಕ್ಷೇತ್ರ ಕಾಯ್ದೆಯ ನಿಯಂತ್ರಣದೊಳಗೆ ಬರುವುದರಿಂದ ಮಕ್ಕಳನ್ನು ಇಲ್ಲಿ ದುಡಿಸುವುದು ಅಪರಾಧವಾಗಿದೆ.**

ಅದಲ್ಲದೇ ಕರ್ನಾಟಕ ಅಂಗಡಿಗಳು ಹಾಗೂ ವಾಣಿಜ್ಯ ಸಂಸ್ಥೆಗಳ ಕಾಯ್ದೆ 1961ರ ಪ್ರಕರಣ 24ರಂತೆ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳು ಬಾಲಕಾರ್ಮಿಕರನ್ನು ಕೆಲಸಕ್ಕೆ ನೇಮಿಸಿಕೊಳ್ಳುವುದು ಸಹ ಶಿಕ್ಷಾರ್ಹವಾದ ಅಪರಾಧವಾಗಿರುತ್ತದೆ.

ಸರ್ಕಾರಿ ನೌಕರರು ಮನೆಗೆಲಸಗಳಿಗೆ ಬಾಲಕಾರ್ಮಿಕರನ್ನು ನೇಮಕ ಮಾಡಿಕೊಂಡಿದ್ದಲ್ಲಿ ಕರ್ನಾಟಕ ಸೇವಾ ನಿಯಮಾವಳಿಗಳ ನಡತೆ ನಿಯಮ 1966-29 (ಎ) (1) ಮತ್ತು 29 (ಎ) (2) ರ ಪ್ರಕಾರ ದುರ್ವರ್ತನೆ ಎಂದು ಪರಿಗಣಿಸಿ ಸಿ.ಸಿ.ಎ. ನಿಯಮಗಳಡಿ ಶಿಕ್ಷಾರ್ಹ ದಂಡನೆಗೆ ಗುರಿಯಾಗುತ್ತಾರೆ.

ಯಾವುದಾದರೂ ಸಂಸ್ಥೆಯ / ಕಾರ್ಖಾನೆಗಳ ಮಾಲೀಕರುಗಳು ಇದಕ್ಕೆ ವ್ಯತಿರಿಕ್ತವಾಗಿ ಬಾಲಕಾರ್ಮಿಕರನ್ನು ಕೆಲಸಕ್ಕೆ ನೇಮಿಸಿಕೊಂಡಲ್ಲಿ ಸದರಿ ಕಾಯ್ದೆಯಡಿ ನೇಮಿಸಿದ ನಿರೀಕ್ಷಕರು, ಪ್ರಕರಣ ದಾಖಲು ಮಾಡಿಕೊಂಡು ನ್ಯಾಯಾಲಯದಲ್ಲಿ ದೂರು ಹೂಡಬಹುದಾಗಿದ್ದು ಅದಕ್ಕೆ ದಂಡ ಮತ್ತು ಸೂಕ್ತ ಅವಧಿಯ ಕಾರಾಗೃಹ ವಾಸ ಅಥವಾ ಅವೆರಡನ್ನು ಒಟ್ಟಿಗೆ ತಪ್ಪಿತಸ್ಥ ಮಾಲೀಕರಿಗೆ ವಿಧಿಸಬಹುದಾಗಿರುತ್ತದೆ. ಅದಲ್ಲದೆ ಅಪಾಯಕಾರಿ ಉದ್ದಿಮೆಯ ಮಾಲೀಕರು ನ್ಯಾಯಾಲಯ ವಿಧಿಸುವ ದಂಡವಲ್ಲದೇ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿರುವ ಬಾಲಕಾರ್ಮಿಕರ ಪುನರ್ ವಸತಿ ಮತ್ತು ಕಲ್ಯಾಣ ನಿಧಿಗೆ ತಲಾ ರೂ. 20,000 ಪರಿಹಾರ ಧನ ಸಂದಾಯ ಮಾಡಬೇಕಾಗುತ್ತದೆ.

ಕಾರ್ಮಿಕ ಇಲಾಖೆಯ ಅಧಿಕಾರಿಗಳಲ್ಲದೆ ಸರ್ಕಾರವು ತಹಶೀಲ್ದಾರರು, ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಹಾಯಕ ಶಿಕ್ಷಣಾಧಿಕಾರಿಗಳು, ನಗರಸಭೆ ಆಯುಕ್ತರು, ಆರೋಗ್ಯ ನಿರೀಕ್ಷಕರು, ಪುರಸಭೆ ಮುಖ್ಯ ಅಧಿಕಾರಿಗಳು, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಕಂದಾಯ ನಿರೀಕ್ಷಕರು, ಪದವೀಧರ ಶಾಲಾ ನಿರೀಕ್ಷಕರುಗಳು, ಸಬ್ ಇನ್ಸ್‌ಪೆಕ್ಟರ್, ಎಲ್ಲಾ ಜಿಲ್ಲಾಮಟ್ಟದ ಅಧಿಕಾರಿಗಳು ಸೇರಿದಂತೆ ಜಿಲ್ಲೆಯ 122 ಅಧಿಕಾರಿಗಳನ್ನು ಸದರಿ ಕಾಯ್ದೆಯ ಸೆಕ್ಷನ್ 17ರಡಿಯಲ್ಲಿ ಕಾರ್ಮಿಕ ನಿರೀಕ್ಷಕರೆಂದು ನೇಮಿಸಿ ಆದೇಶ ಹೊರಡಿಸಲಾಗಿದ್ದರಿಂದ ಅವರೆಲ್ಲರೂ ಸೂಕ್ತ ಕಾನೂನು ಕ್ರಮ ಜರುಗಿಸಲು ಅಧಿಕಾರ ಹೊಂದಿರುತ್ತಾರೆ. ಅವರು ಯಾವಾಗ ಬೇಕಾದರೂ 14 ವರ್ಷದೊಳಗಿನ ಮಕ್ಕಳನ್ನು ದುಡಿಮೆಗೆ ನೇಮಿಸಿದ ಸ್ಥಳಗಳಿಗೆ ದಾಳಿ ನೀಡಿ ಕ್ರಮ ಕೈಗೊಳ್ಳಬಹುದಾಗಿದೆ.

ಸರ್ಕಾರ ಬಾಲಕಾರ್ಮಿಕ ಪದ್ಧತಿಯನ್ನು ತೆಗೆದುಹಾಕಲು ಕಟಿಬದ್ಧವಾಗಿದ್ದು ಮಾನ್ಯ ಸರ್ವೋಚ್ಛ ನ್ಯಾಯಾಲಯದ ಆದೇಶದಂತೆ ಪುನರ್ವಸತಿ ಕಾರ್ಯದ ಅಂಗವಾಗಿ 14 ವರ್ಷ ವಯೋಮಿತಿಯೊಳಗಿನ ಕಾರ್ಮಿಕರನ್ನು ಶಾಲೆಗೆ ಸೇರಿಸುವ ಕಾರ್ಯ ಶಿಕ್ಷಣ ಇಲಾಖೆಯಿಂದ ನಡೆಯುತ್ತಿದೆ. ರಾಯಚೂರು ಜಿಲ್ಲೆಯಲ್ಲಿ ರಾಷ್ಟ್ರೀಯ ಬಾಲಕಾರ್ಮಿಕರ ಯೋಜನೆಯಡಿಯಲ್ಲಿ 32 ಬಾಲಕಾರ್ಮಿಕ ವಿಶೇಷ ಪುನರ್ವಸತಿ ಶಾಲೆಗಳು ನಡೆಯುತ್ತಿವೆ. ಈ ಶಾಲೆಗಳಿಗೆ ಇಂತಹ ಮಕ್ಕಳನ್ನು ದಾಖಲಿಸಲು ಈ ಮೂಲಕ ಸೂಚಿಸಲಾಗಿದೆ. ಆದುದರಿಂದ ಮಾಲೀಕರು ಕೂಡಲೇ ಬಾಲಕಾರ್ಮಿಕರನ್ನು ಕೆಲಸಕ್ಕೆ ನೇಮಿಸಿಕೊಳ್ಳುವುದನ್ನು ನಿಲ್ಲಿಸಬೇಕೆಂದು ಮತ್ತು ಪಾಲಕರು ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸಲು ಸಹಕರಿಸಬೇಕೆಂದು ತಪ್ಪಿದಲ್ಲಿ ಸೂಕ್ತ ಕ್ರಮ ಕಟ್ಟುನಿಟ್ಟಾಗಿ ಜರುಗಿಸಲಾಗುತ್ತದೆ ಎಂದು ತಿಳಿಯಪಡಿಸಿದೆ.

**ಎಂ. ಜಿ. ವಿಜಯ ಕುಮಾರ್,** ಕೆ.ಜಿ.ಎಸ್.
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
ಜಿಲ್ಲಾ ಪಂಚಾಯತ್, ರಾಯಚೂರು.

**ಟಿ. ಆರ್. ಸುರೇಶ್,** ಭಾ.ಪೊ.ಸೇ.
ಪೊಲೀಸ್ ವರಿಷ್ಠಾಧಿಕಾರಿಗಳು,
ರಾಯಚೂರು ಜಿಲ್ಲೆ, ರಾಯಚೂರು.

**ವಿ. ಅನ್ಬುಕುಮಾರ್,** ಭಾ.ಆ.ಸೇ.
ಜಿಲ್ಲಾಧಿಕಾರಿಗಳು, ರಾಯಚೂರು ಜಿಲ್ಲೆ,
ರಾಯಚೂರು.

---

**"ಮಕ್ಕಳ ದುಡಿಮೆ ರಾಷ್ಟ್ರ ಕಳಂಕ" - 14 ವರ್ಷದೊಳಗಿನ ಮಕ್ಕಳನ್ನು ದುಡಿಸುವುದು ಶಿಕ್ಷಾರ್ಹ ಅಪರಾಧ.**

# ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆ ಬಗ್ಗೆ ನಿಮಗೆ ತಿಳಿದಿರಲಿ

| ತಪ್ಪು ✗ | ಸರಿ ✓ |
|---|---|
| 1 ರಿಂದ 14 ವರ್ಷದೊಳಗಿನವರು ಮಾತ್ರ ಮಕ್ಕಳು | **18 ವರ್ಷದೊಳಗಿನವರೆಲ್ಲಾ ಮಕ್ಕಳು** |
| ಬಾಲಕಾರ್ಮಿಕ ಪದ್ಧತಿ ಒಂದು 'ಕಲ್ಯಾಣ' ಕಾರ್ಯಕ್ರಮಕ್ಕೆ ಸಂಬಂಧಿಸಿದ ಸಮಸ್ಯೆ | **ಬಾಲಕಾರ್ಮಿಕ ಪದ್ಧತಿ ಇದೊಂದು ಅಭಿವೃದ್ಧಿಗೆ ಮಾರಕವಾದ ಸಮಸ್ಯೆ.** |
| ಮಕ್ಕಳು ಚಿಕ್ಕವರು, ಅವರಿಗೆ ಯಾವ ಹಕ್ಕು ಅನ್ವಯಿಸುವುದಿಲ್ಲ. | **"ಮಕ್ಕಳು ಹಕ್ಕುಗಳು" ಮಾನವ ಹಕ್ಕುಗಳು ಅವರಿಗೆ ಎಲ್ಲ ಹಕ್ಕು ಅನ್ವಯಿಸುತ್ತದೆ ಅವರಿಗೆ ಅವರದ್ದೇ ಆದ ಹಕ್ಕುಗಳಿವೆ.** |
| ಇಂದಿನ ಮಕ್ಕಳು ಮುಂದಿನ ಪ್ರಜೆಗಳು | **ಇಂದಿನ ಮಕ್ಕಳು ಇಂದಿನ ಪ್ರಜೆಗಳು** |
| ಕಷ್ಟ, ಬರಗಾಲ, ಕುಟುಂಬದ ಸಮಸ್ಯೆಗಾಗಿ ಮಕ್ಕಳನ್ನು ದುಡಿಸುವುದು ತಪ್ಪಲ್ಲ. | **ಮಕ್ಕಳನ್ನು ದುಡಿಸುವುದು ಶಿಕ್ಷಾರ್ಹ ಅಪರಾಧ ಒಂದು ವರ್ಷ ಜೈಲು ರೂ. 20 ಸಾವಿರ ದಂಡ.** |
| ಮಕ್ಕಳ ಸಮಸ್ಯೆ ನಮಗೆ ಮತ್ತು ಪಂಚಾಯ್ತಿಗೆ ಅನ್ವಯಿಸುವುದಿಲ್ಲ. | **18 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಅವರ ಹಕ್ಕುಗಳನ್ನು ನೀಡಿ ಗೌರವಿಸಿ, ಅನುಭವಿಸಲು ಬಿಡುವುದು ಹಾಗೂ ಬಾಲ್ಯ, ಪ್ರೀತಿ, ಶಿಕ್ಷಣ ಮತ್ತು ರಕ್ಷಣೆ ನೀಡುವುದು ಪ್ರತಿಯೊಬ್ಬ ನಾಗರಿಕನ / ಪಂಚಾಯಿತಿಯ / ವಾರ್ಡ್ ಸಮಿತಿಯ ಕರ್ತವ್ಯ ಮತ್ತು ಜವಾಬ್ದಾರಿ.** |
| ಬಡತನ, ಅನಕ್ಷರತೆ, ನಿರುದ್ಯೋಗ ಮತ್ತು ಜನಸಂಖ್ಯೆ ಇವು ಬಾಲಕಾರ್ಮಿಕ ಪದ್ಧತಿಗೆ ಮುಖ್ಯ ಕಾರಣವಾಗಿದೆ. | **ಬಾಲಕಾರ್ಮಿಕ ಪದ್ಧತಿಯೇ ಬಡತನ, ಅನಕ್ಷರತೆ, ನಿರುದ್ಯೋಗ ಮತ್ತು ಜನಸಂಖ್ಯೆಗೆ ಕಾರಣವಾಗಿದೆ.** |
| ಮಕ್ಕಳನ್ನು ದುಡಿಸುವುದರಿಂದ ನಮ್ಮ ಕುಟುಂಬ ನಡೆಯುತ್ತದೆ. | **ಮಕ್ಕಳನ್ನು ದುಡಿಸುವುದರಿಂದ ಯಾವ ಬಡ ಕುಟುಂಬವೂ ನಡೆಯುವುದಿಲ್ಲ ಮತ್ತು ಉದ್ಧಾರವಾಗಿಲ್ಲ.** |
| ಮಕ್ಕಳನ್ನು ಕೆಲಸ, ಜೀತ, ದಿನಗೂಲಿ ಮತ್ತು ಸಂಬಳಕ್ಕೆ ಹಚ್ಚುವುದರಿಂದ ನಮ್ಮ ಕುಟುಂಬದ ಬಡತನ ಕಡಿಮೆಯಾಗಿದೆ. | **ಮಕ್ಕಳನ್ನು ಕೆಲಸ, ಜೀತ, ದಿನಗೂಲಿ ಮತ್ತು ಸಂಬಳಕ್ಕೆ ಹಚ್ಚುವುದರಿಂದ ಆ ಕುಟುಂಬದ ಬಡತನ ಹೆಚ್ಚುತ್ತದೆ.** |
| ನಮ್ಮ ಸ್ವಂತ ಮಕ್ಕಳನ್ನು ನಾವು ನಮ್ಮ ಇಚ್ಛೆಯಂತೆ ಕೆಲಸಕ್ಕೆ ಕಳುಹಿಸಬಹುದು ಮತ್ತು ಕೆಲಸಕ್ಕೆ ಮನೆಯಲ್ಲಿ ಇಡಬಹುದು. | **ನಮ್ಮ ಸ್ವಂತ ಮಕ್ಕಳನ್ನು ಕೂಡ 14 ವರ್ಷಗಳ ತನಕ ಎಲ್ಲಿಯೂ ಹಾಗೂ ಸ್ವಂತ ಮನೆಯಲ್ಲಿಯೂ ಶಾಲೆ ಬಿಡಿಸಿ ಕೆಲಸಕ್ಕೆ ಹಚ್ಚುವಂತಿಲ್ಲ, ಅದು ಕಾನೂನಿನ ಪ್ರಕಾರ ಅಪರಾಧ ಹಾಗೂ ಉಲ್ಲಂಘನೆ.** |
| ವಯಸ್ಸಾದ ಮೇಲೆ ಗಂಡುಮಕ್ಕಳು ಮಾತ್ರ ನಮ್ಮನ್ನು ನೋಡುತ್ತಾರೆ. ಹೆಣ್ಣುಮಕ್ಕಳು ಕುಟುಂಬಕ್ಕೆ ಹೊರೆ. | **ಹೆಣ್ಣುಮಕ್ಕಳು ಗಂಡುಮಕ್ಕಳಿಗಿಂತ ಚೆನ್ನಾಗಿ ಪೋಷಕರನ್ನು ನೋಡುತ್ತಾರೆ. ಹೆಣ್ಣುಮಕ್ಕಳು ಕುಟುಂಬಕ್ಕೆ ಭಾಗ್ಯ.** |
| ಬಾಲ್ಯವಿವಾಹ ನಮ್ಮ ಕುಟುಂಬದ, ಸಂಸ್ಕೃತಿಯ, ಜಾತಿಯ ಕ್ರಮ. | **ಬಾಲ್ಯ ವಿವಾಹ ಶಿಕ್ಷಾರ್ಹ ಅಪರಾಧ.** |
| ಹುಡುಗಿಯರು ಇರುವುದೇ ಮನೆಕೆಲಸಕ್ಕೆ. ಶಿಕ್ಷಣ ಅವರನ್ನು ಹಾಳು ಮಾಡುತ್ತದೆ. | **ಶಿಕ್ಷಣ ಪ್ರತಿಯೊಬ್ಬ ನಾಗರಿಕನ ಸಮಾನ ಹಕ್ಕು. ಶಿಕ್ಷಣ ಎಲ್ಲರನ್ನು ಅಭಿವೃದ್ಧಿಯತ್ತ ಕೊಂಡೊಯ್ಯುತ್ತದೆ.** |
| ಚಿಕ್ಕ ವಯಸ್ಸಿನಲ್ಲಿ ಕೆಲಸ ಕಲಿತರೆ ಮಾತ್ರ ಮುಂದೆ ಕೆಲಸ ಮಾಡಲು ಸಾಧ್ಯ. | **ಶಿಕ್ಷಣ ಇಲ್ಲದೆ ಯಾವುದೇ ಕೆಲಸ ಕೌಶಲ್ಯಪೂರ್ಣ ಆಗಲು ಸಾಧ್ಯವಿಲ್ಲ.** |
| ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆ ಸಾಧ್ಯವಿಲ್ಲ. | **ಎಲ್ಲಾ ಮಕ್ಕಳು 10ನೇ ತರಗತಿ ತನಕ ಶಾಲೆಯಲ್ಲಿದ್ದರೆ ತನ್ನಿಂದತಾನೇ ಬಾಲಕಾರ್ಮಿಕ ಪದ್ಧತಿ ಸಂಪೂರ್ಣ ನಿರ್ಮೂಲನೆಯಾಗುತ್ತದೆ.** |
| ಶಿಸ್ತು ಕಲಿಸಲು, ಶಿಕ್ಷಣ ಕಲಿಯಲು ಮಕ್ಕಳಿಗೆ ದೈಹಿಕ ಶಿಕ್ಷೆ ಅನಿವಾರ್ಯ. | **ಮಕ್ಕಳ ಮೇಲಿನ ಯಾವುದೇ ಶಿಕ್ಷೆ ಅಥವಾ ದೌರ್ಜನ್ಯ ಶಿಕ್ಷಾರ್ಹ ಅಪರಾಧ.** |

**ಪ್ರಕಟಣೆ : ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಪೋಲೀಸ್ ಇಲಾಖೆ (✆ 235100), ನಗರಸಭೆ, ಸಾರ್ವಜನಿಕ ಶಿಕ್ಷಣ ಇಲಾಖೆ, ಕಾರ್ಮಿಕ ಇಲಾಖೆ (✆ 226368), ರಾಷ್ಟ್ರೀಯ ಬಾಲಕಾರ್ಮಿಕ ಯೋಜನಾ ಸಂಘ (✆ 227581), ಹಾಗೂ ಯುನಿಸೆಫ್ "ಮಕ್ಕಳ ಸಂರಕ್ಷಣಾ" ಯೋಜನೆ, ಜಿಲ್ಲಾಧಿಕಾರಿಗಳ ಕಛೇರಿ, ರಾಯಚೂರು. (✆ 08532–230610)**